ಪ್ರತಿಯಂತ್ರವೂ ಇಪ್ಪತ್ತು ಜನರನ್ನು ಶ್ರೀಮಂತರನ್ನಾಗಿ ಮಾಡಬಹುದು. ಆದರೆ ಇಪ್ಪತ್ತು ಸಾವಿರ ಜನರು ಬಡವರಾಗುತ್ತಾರೆ."

ಇದೇ ತತ್ತ್ವವನ್ನು ಗಾಂಧೀಜಿಯವರು ಸಹ ಎತ್ತಿ ಹಿಡಿದರು. ಅವರ 'ಹಿಂದ್‌ಸ್ವರಾಜ್' ಪುಸ್ತಕ ಈ ತತ್ತ್ವವನ್ನು ವಿಶದಪಡಿಸುತ್ತದೆ. ಈ ಪುಸ್ತಕದಲ್ಲಿ ಗಾಂಧೀಜಿ ಹೇಳುತ್ತಾರೆ, "ಕೈಗಾರಿಕೀಕರಣದಲ್ಲಿ 'ಕೆಟ್ಟದ್ದು' ಎಂಬುದು ಅಂತರ್ಗತವಾಗಿದೆ. ಅದನ್ನು ಸಾಮಾಜೀಕರಣ ಮಾಡಿದಾಕ್ಷಣ ಕೈಗಾರಿಕೀಕರಣದ ಕೆಡುಕುಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ." ಗಾಂಧೀಜಿಯವರ ಕನಸಿನ ಗ್ರಾಮರಾಜ್ಯ ಮಣ್ಣುಗೂಡಿದ್ದನ್ನು ನೆನೆದು ಶ್ರೀ ಕುವೆಂಪು ಅವರು 'ವಿಚಾರಕ್ರಾಂತಿಗೆ ಆಹ್ವಾನ' ಎಂಬ ತಮ್ಮ ಭಾಷಣದಲ್ಲಿ ಹೀಗೆ ಹೇಳುತ್ತಾರೆ: "ಆತನ ದೇಹಕ್ಕೆ ಗುಂಡಿಕ್ಕಿ ಕೊಂದವನೇನೋ ಒಬ್ಬನೆ; ಆದರೆ ತರುವಾಯ ಆತನ ಧ್ಯೇಯಕ್ಕೆ ಉರುಳಿಕ್ಕಿ ಕೊಂದವರಲ್ಲಿ ಹಲವರು ಆತನ ಅನುಯಾಯಿಗಳೆ! ನೆಹರೂ ಅವರ ಮುಂದಾಳುತನದ ನೇತೃತ್ವದಲ್ಲಿ ನಾವು ಗಾಂಧೀಜಿಯ ತತ್ತ್ವಗಳನ್ನೆಲ್ಲ ಮೂಲೆಗೊತ್ತಿ, ನಮ್ಮ ರಾಷ್ಟ್ರವನ್ನು ಅಭಿವೃದ್ಧಿ ಹೊಂದಿದ ಶ್ರೀಮಂತ ಪಾಶ್ಚಾತ್ಯ ದೇಶಗಳ ಸರಿಸಮಕ್ಕೇರಿಸುವ ಹುಮ್ಮಸ್ಸಿನಲ್ಲಿ ಸಂಪೂರ್ಣವಾಗಿ ಅವರ ಅನುಕರಣೆಗೆ ದೀಕ್ಷಿತರಾದೆವು."

"ನಮ್ಮ ದೇಶದ ಸಂಸ್ಕೃತಿಗೆ ತಕ್ಕಂತೆ ನಾವು ಬೆಳೆಯಬೇಕು, ಅಭಿವೃದ್ಧಿಯಾಗಬೇಕು. ಇದೇ ನನ್ನ ಆದರ್ಶ. ನಾನು ನನ್ನ ದೇಶವನ್ನು ನಿಂದಿಸುವುದಿಲ್ಲ" ಎಂದು ಸ್ವಾಮೀಜಿ ಹೇಳುತ್ತಾರೆ. ಮುಂದುವರೆದು ಅವರು ಹೇಳುತ್ತಾರೆ, "ಪ್ರತಿಯೊಂದು ದೇಶದಲ್ಲೂ ದೋಷಗಳಿವೆ. ಆದರೆ ಅವು ಧರ್ಮದಿಂದ ಆದವುಗಳಲ್ಲ. ಧರ್ಮವನ್ನು ಅನುಸರಿಸದೆ ಇರುವುದರಿಂದ ಆಗಿದೆ." ಸ್ವಾಮೀಜಿಯವರು ವಿದ್ಯಾವಂತರಾದ ಭಾರತೀಯರು ಪಾಶ್ಚಾತ್ಯರನ್ನು ಕುರುಡಾಗಿ ಅನುಸರಿಸುವುದನ್ನು ಕಂಡು ಸಿಡಿಮಿಡಿಗೊಂಡರು. ಅನುಕರಣೆಯೇ ಪ್ರಗತಿಯ ಸಂಕೇತ ಎಂದು ಭಾವಿಸಬೇಡಿ; ಪರಕೀಯರಂತೆ ಆಹಾರ ಸೇವಿಸುವುದು, ಬಟ್ಟೆ ಧರಿಸುವುದು, ಅವರ ಹಾವಭಾವಗಳನ್ನು ಅನುಕರಿಸುವುದರಿಂದ ನಮಗೇನೂ ಲಾಭವಿಲ್ಲ; ಈ ಭಾರತೀಯ ಜೀವನವಿಧಾನದಿಂದ ಯಾವ ಕಾರಣಕ್ಕೂ ಹೊರಸರಿಯಬಾರದು. ಇದು ಸ್ವಾಮೀಜಿಯವರ ಅಭಿಪ್ರಾಯ.

ಆದರೆ ಈ ಅನುಕರಣೆ ಅಂದಿನಿಂದ ಇಂದಿನವರೆಗೆ ಹೆಚ್ಚಾಗುತ್ತಲೇ ಬಂದಿದೆ. ಇದಕ್ಕೆ ತದ್ವಿರುದ್ಧವಾಗಿ ಪಾಶ್ಚಾತ್ಯರು ನಮ್ಮ ಯೋಗ–ಅಧ್ಯಾತ್ಮಗಳನ್ನೂ, ಬುದ್ಧನ ಬೋಧನೆಗಳನ್ನೂ ನಮಗಿಂತ ಗಂಭೀರವಾಗಿ ಸ್ವೀಕರಿಸಿರುವುದನ್ನು ನಾವು ಕಾಣಬಹುದು. ನಮ್ಮ ಈ ಅಂಧಾನುಕರಣೆಗೆ ಮುಖ್ಯವಾದ ಕಾರಣವೆಂದರೆ ನಮ್ಮ ಯುವಕ–ಯುವತಿಯರಿಗೆ ನಮ್ಮದೇ ಪರಂಪರೆಯ, ಸಾಂಸ್ಕೃತಿಕ ಚರಿತ್ರೆಯ ಬಗ್ಗೆ ಎಳ್ಳಷ್ಟೂ ತಿಳಿವಳಿಕೆ ಇಲ್ಲದಿರುವುದು. ಇಂದಿನ ಮಾಧ್ಯಮಗಳು ಈ ಅನುಕರಣೆಗೆ ಪೂರಕವಾಗಿ ಕೀಳು ಅಭಿರುಚಿಯನ್ನು ಮೂಡಿಸುವ ಮೂರನೇ ದರ್ಜೆಯ ಮನರಂಜನೆಯನ್ನು ಮಾತ್ರ ಜನತೆಗೆ ಒದಗಿಸುತ್ತಿವೆ. ಹಾಗಾಗಿ ನಮ್ಮ ಯುವಜನಾಂಗಕ್ಕೆ ನಮ್ಮ ಸಂಸ್ಕೃತಿಯ ಒಳ್ಳೆಯ ವಿಚಾರಗಳೇ ತಿಳಿದಿಲ್ಲ. ಚರಿತ್ರೆಯ ಅತ್ಯಂತ ಪ್ರಮುಖ ಕಾಲಘಟ್ಟದಲ್ಲಿ ನಿಂತಿರುವ ನಾವು ನಮ್ಮ ಸಾಂಸ್ಕೃತಿಕ ಪರಂಪರೆಯ ಜ್ಞಾನದಿಂದ ಸಶಕ್ತರಾಗಿ ಹೇಗೆ ಸುಸ್ಥಿರ ಸಮಾಜವನ್ನು ಕಟ್ಟಬಹುದು ಎಂದು ಚಿಂತಿಸುತ್ತಲೇ ಇಲ್ಲ. ಜಾಗತೀಕರಣದ ಪ್ರಭಾವದಿಂದಾಗಿ ನಮ್ಮ ದೇಶದಲ್ಲೂ ಪರಿಸರದ ಸಮಸ್ಯೆ ಹುಟ್ಟಿದೆ; ಮನುಷ್ಯ ಸಂಬಂಧಗಳು ಶಿಥಿಲವಾಗುತ್ತಿವೆ. ಮೌಲ್ಯಗಳ ಕುಸಿತದಿಂದ ನಂಬಿ ಬದುಕಬಹುದಾದ ಜಗತ್ತೇ ಮಾಯವಾದಂತೆ ಭಾಸವಾಗುತ್ತಿದೆ. ನಮ್ಮ ಜೀವನ ಹೊಸ ತಿರುವು ಪಡೆಯುತ್ತಿರುವ ಈ ಸಂಕ್ರಮಣ ಕಾಲದಲ್ಲಿ ನಮಗೆ ಮಾರ್ಗದರ್ಶನ ನೀಡಬಹುದಾಗಿದ್ದ ನಮ್ಮ ಪರಂಪರೆ ಮತ್ತು ಸಂಸ್ಕೃತಿಗಳ ಆರೋಗ್ಯಕರ ಅಂಶಗಳನ್ನು ಮರೆತು ಮುನ್ನಡೆದಿದ್ದೇವೆ. ದೋಣಿ ನಡೆಸಲು ಬೇಕಾದ ಹುಟ್ಟುಗಳು ದೋಣಿಯಲ್ಲೇ ಇದ್ದರೂ ಹೊಸ ಹುಟ್ಟುಗಳನ್ನು ಹುಡುಕಿಕೊಂಡು ಹೊರಗೆ ಎಲ್ಲೋ ಅಲೆಯುತ್ತಿದ್ದೇವೆ.

ಸ್ತ್ರೀಯರ ಅಭಿವೃದ್ಧಿಯನ್ನು ಕುರಿತು ಮಾತನಾಡುವಾಗಲೂ ಸ್ವಾಮೀಜಿ, ಮಹಿಳೆಯರು ಅವರ ಸ್ವಭಾವಕ್ಕೆ, ಸಾಮರ್ಥ್ಯಕ್ಕೆ ಅನುಗುಣವಾಗಿ ಬೆಳೆಯಬೇಕು ಎನ್ನುತ್ತಾರೆ. ಮಹಿಳೆಯರ ಅಭಿವೃದ್ಧಿಯ ಬಗ್ಗೆ ಕಡೆಯ ನಿರ್ಧಾರ ಕೈಗೊಳ್ಳಲು ಗಂಡಸರಿಗೆ ಅಧಿಕಾರ ಕೊಟ್ಟವರು ಯಾರು, ಪುರುಷರ ಹಸ್ತಕ್ಷೇಪ ಇಲ್ಲಿ ಬೇಡ ಎಂದು ಕಠಿಣವಾಗಿ ಎಚ್ಚರಿಸುತ್ತಾರೆ. ನಮ್ಮ ದೇಶ ಇರುವುದು ಬಡಗುಡಿಸಿಲುಗಳಲ್ಲಿ, ನಮ್ಮ ಶ್ರೀಸಾಮಾನ್ಯ ತನ್ನತನವನ್ನು ಉಳಿಸಿಕೊಂಡು ತನ್ನ ಸಂಸ್ಕೃತಿಗನುಗುಣವಾಗಿ ಅಭಿವೃದ್ಧಿಯಾಗಬೇಕು ಎಂದೂ ಎಚ್ಚರಿಕೆ ಕೊಡುತ್ತಾರೆ. ಗಾಂಧೀಜಿ ಅವರ ಕನಸಿನ ಅಭಿವೃದ್ಧಿಯ ಕಲ್ಪನೆ ಕೂಡ ಇದಕ್ಕಿಂತ ಬೇರೆಯಾಗಿರಲಿಲ್ಲ. ಆದರೆ ನೆಹರೂ ನೇತೃತ್ವದ ಭಾರತ ಈ ಯಾವ ಸೂಕ್ಷ್ಮತೆಯನ್ನೂ ಉಳಿಸಿಕೊಳ್ಳದೆ ಅಂತರರಾಷ್ಟ್ರೀಯ ಹೆಚ್ಚುಗಾರಿಕೆಗಾಗಿ ಭಾರತವನ್ನು ಸಿದ್ಧಗೊಳಿಸಲು ಪಂಚವಾರ್ಷಿಕ ಯೋಜನೆಗಳನ್ನು ಎರವಲು ಪಡೆಯಿತು. ಹೀಗಾಗಿ ನಮ್ಮ ರಾಷ್ಟ್ರ ಅನೇಕ ಸಹಸ್ರಾರು ವರ್ಷಗಳ ಅಸ್ಮಿತೆಯನ್ನು ಅಥವಾ ತನ್ನತನವನ್ನು ಕಳೆದುಕೊಳ್ಳುವ ಸ್ಥಿತಿಗೆ ಬಂದು ನಿಂತಿದೆ.


ಇಂತಹ ಒಂದು ಸಂದಿಗ್ಧ ಕಾಲದಲ್ಲಿ ಸ್ವಾಮಿ ವಿವೇಕಾನಂದರ ವಿಚಾರಧಾರೆಯನ್ನು ರಕ್ತಗತ ಮಾಡಿಕೊಂಡು ನಮ್ಮ ಅಸ್ಮಿತೆಯನ್ನು ನಾವು ಮರಳಿಪಡೆಯಬೇಕು. ಸ್ವಾಮೀಜಿಯವರ ವಿಚಾರಧಾರೆಯನ್ನು ಅರಿತರೆ ನಮಗೆ ನಮ್ಮ ಇಡೀ ಪರಂಪರೆಯ, ಸಂಸ್ಕೃತಿಯ ಸಾರ ದೊರೆತುಬಿಡುತ್ತದೆ. "ಧರ್ಮ ಇರುವುದು ಪ್ರೀತಿಯಲ್ಲಿ... ವಿಧವೆಯರ ದುಃಖವನ್ನು ಶಮನ ಮಾಡದ, ಅನಾಥರ ಬಾಯಿಗೆ ಒಂದು ತುತ್ತು ಅನ್ನವನ್ನು ಕೊಡದ ಧರ್ಮದಲ್ಲಾಗಲೀ, ದೇವರಲ್ಲಾಗಲೀ ನನಗೆ ನಂಬಿಕೆಯಿಲ್ಲ" ಎಂಬ ಸ್ವಾಮೀಜಿಯವರ ಮಾತುಗಳನ್ನು ಗಂಭೀರವಾಗಿ ಗಮನಿಸಿದರೆ ಸಾಕು, ಸುಸ್ಥಿರ ಸಮಾಜದ ಹೊಸದಾರಿ ಕಾಣತೊಡಗುತ್ತದೆ. ನಮ್ಮ ಸಂಸ್ಕೃತಿಯನ್ನು ಜೀವಂತವಾಗಿಟ್ಟುಕೊಂಡು, 'ಜಾತಿಭಾರತ' ದಿಂದ 'ಸಮಾಜವಾದಿ ಭಾರತ' ದ ಕಡೆಗೆ ನಾವು ಪ್ರಗತಿ ಸಾಧಿಸಬೇಕೆಂಬುದು ಸ್ವಾಮೀಜಿಯವರ ಆಶಯವಾಗಿತ್ತು. ಆದರೆ ಇಂದು ನಮ್ಮ ರಾಜಕೀಯ ಪರಿಸರದಿಂದಾಗಿ ಜಾತಿಯಷ್ಟೆ ಉಳಿದುಕೊಂಡು ನಿಜವಾದ 'ಸಮಾಜವಾದ'ವೆಂಬುದು ದೂರವೇ ಉಳಿದಿದೆ.

# ಸ್ವಾಮಿ ವಿವೇಕಾನಂದರ ಜೀವನದರ್ಶನ – ೭

**ನಿರೂಪಣೆ:** ಸ್ವಾಮಿ ರಾಘವೇಶಾನಂದ ; **ಅನುವಾದ :** ಸಿ.ಎಸ್.ಮಂಗಳಮ್ಮ; **ಮೂಲ ಕಲಾಕೃತಿ :** ಪದ್ಮಾ ವಾಸನ್; **ವರ್ಣಪಾರದರ್ಶಿಕೆ:** ಬಿ.ಕೆ.ಸೋಮಶೇಖರ



ಕೊಲಂಬೊ ಇಂದ ಚೆನ್ನೈವರೆಗೆ ಪ್ರತಿ ರೈಲು ನಿಲ್ದಾಣದಲ್ಲಿಯೂ ಸಾವಿರಾರು ಜನರು ಅವರ ದರ್ಶನವನ್ನು ಪಡೆದರು. ಜಯಘೋಷಗಳು ಮೊಳಗುತ್ತಿದ್ದವು. ಇಡೀ ರಾಷ್ಟ್ರವೇ ಸಂತೋಷದಿಂದ ಹುಚ್ಚೆದ್ದು ಕುಣಿಯಿತು.



ಚೆನ್ನೈನಲ್ಲಿ ಸ್ವಾಮೀಜಿಯವರ ಮೇಲಿನ ಅಭಿಮಾನ ಜನರ ಉಲ್ಲಾಸವನ್ನು ಮೇರೆ ಮೀರಿ ಏರಿಸಿತು. ನಾಲ್ಕು ವರ್ಷಗಳ ಹಿಂದೆ ಓರ್ವ ಅಪರಿಚಿತ ಸಂನ್ಯಾಸಿಯಾಗಿ ಬಂದಿದ್ದವರ ಮಹತ್ವವನ್ನು ಮೊಟ್ಟಮೊದಲು ಗುರುತಿಸಿದ್ದು ಈ ನಗರವೇ! ಎಲ್ಲರ ತುಟಿಗಳಲ್ಲೂ ನಾಲಿಗೆಯಲ್ಲೂ ಸ್ವಾಮೀಜಿಯವರ ಹೆಸರೇ! ಚೆನ್ನೈನ ರಾಜಬೀದಿಗಳಲ್ಲಿ ಪ್ರತಿ ಚೌಕದಲ್ಲಿಯೂ ಅಲಂಕೃತವಾದ ಸುಂದರ ಕಮಾನುಗಳನ್ನು ಕಟ್ಟಿದ್ದರು. ಆತ್ಮೀಯವಾಗಿ ಸ್ವಾಗತಿಸಲು ರೈಲು ನಿಲ್ದಾಣದಲ್ಲಿ ಸಹಸ್ರಾರು ಜನರು ನೆರೆದಿದ್ದರು. ಉತ್ಸಾಹಿ ತರುಣರು ಗಾಡಿಗೆ ಕಟ್ಟಿದ್ದ ಕುದುರೆಗಳನ್ನು ಬಿಚ್ಚಿ ತಾವೇ ರಥವನ್ನು ಎಳೆದರು. ಸ್ವಾಮೀಜಿಯವರ ದರ್ಶನಾಕಾಂಕ್ಷಿಗಳಾಗಿ ರಸ್ತೆಯ ಇಕ್ಕೆಲಗಳಲ್ಲಿಯೂ ಸಾವಿರಾರು ಜನರು ಸಾಲುಗಟ್ಟಿ ಗುಂಪುಗೂಡಿ ನೆರೆದಿದ್ದರು. ಎಗ್‌ಮೋರ್ ರೈಲುನಿಲ್ದಾಣದಿಂದ ಸ್ವಾಮೀಜಿಯವರು ತಂಗುವ ಸ್ಥಳವಾದ ಚೆನ್ನೈ ಬೀಚ್‌ನಲ್ಲಿರುವ 'ಕ್ಯಾಸೆಲ್ ಕರ್ನನ್' ಎಂಬ ಕಟ್ಟಡದವರೆಗೆ ಚಿರಸ್ಮರಣೀಯವಾದ ಮೆರವಣಿಗೆಯಲ್ಲಿ ಕರೆದೊಯ್ದರು. ಸಾಲಂಕೃತ ಆನೆಗಳು ಆ ಬೃಹತ್ ಮೆರವಣಿಗೆಯ ಮುಂಚೂಣಿಯಲ್ಲಿದ್ದವು. ವಾದ್ಯಗಳಿಂದ ಭಕ್ತಿಗೀತೆಗಳು, ಘೋಷಣೆಗಳು ಗಗನ ಮುಟ್ಟುವಂತೆ ಮೊಳಗುತ್ತಿದ್ದವು. ಹಾದಿಯ ಎರಡೂ ಪಕ್ಕಗಳ ಮನೆಗಳ ಮೇಲಿಂದ ಜನರು ಪರಿಮಳಯುಕ್ತ ಪುಷ್ಪವೃಷ್ಟಿಯನ್ನು ಸುರಿಸುತ್ತಿದ್ದರು. ಸ್ವಾಮೀಜಿಯವರು ಈ ಎಲ್ಲ ಆದರ ಗೌರವಗಳನ್ನೂ ಗಾಂಭೀರ್ಯದಿಂದ ಸ್ವೀಕರಿಸಿದರು. ಈ ಮೂಲಕ ಜನರು ಭಾರತದ ಅತ್ಯಂತ ಶ್ರೇಷ್ಠ ಆಧ್ಯಾತ್ಮಿಕತೆಗೆ ಗೌರವ ಸಲ್ಲಿಸುತ್ತಿರುವರೆಂದು ಸ್ವಾಮೀಜಿ ಭಾವಿಸಿದರು. ಚೆನ್ನೈನಲ್ಲಿ ತಂಗಿದ್ದ ಒಂಬತ್ತು ದಿನಗಳಲ್ಲಿ ಅವರು ನೀಡಿದ ಸಾರ್ವಜನಿಕ ಉಪನ್ಯಾಸಗಳೆಲ್ಲವೂ ಅವಿಸ್ಮರಣೀಯವಾದುವು.

